**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ **31/2019** ಸಿ.ಡಬ್ಲ್ಯೂ–**07** ಪಿ.ಡಬ್ಲ್ಯೂ-**6**

| | | |
|---|---|---|
| ಹೆಸರು | ಃ | ಮಲ್ಲಪ್ಪಾ |
| ತಂದೆಃಗಂಡ | ಃ | ತುಳಜಪ್ಪಾ |
| ವಯಸ್ಸು | ಃ | **61** ವರ್ಷ |
| ಉದ್ಯೋಗ | : | ನಿವೃತ ಎಚ್.ಸಿ. ನಿಂಬರ್ಗಾ |
| ವಾಸಸ್ಥಳ | ಃ | ನಿಂಬರ್ಗಾ |

ದಿನಾಂಕಃ **23.08.2025**

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ನಾನು ಅಗಷ್ಟ 2017 ರಿಂದ 26-10-2018 ರವರೆಗೆ ನಾನು ನಿಂಬರ್ಗಾ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆ ಅಂತಾ ಕಾರ್ಯ ನಿರ್ವಹಿಸಿದ್ದೇನೆ.

ದಿಃ 13-10-2018 ರಂದು ರಾತ್ರಿ 8.10 ಗಂಟೆಗೆ ಚಾಸಾ 1 ರವರು ನೀಡಿದ ಫಿರ್ಯಾದಿ ಮೇರೆಗೆ ಆ ಪಿರ್ಯಾಧಿಯನ್ನು ಪಡೆದುಕೊಂಡು ಅದರ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆ 128/2018 ನ್ನು ತಯಾರಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತೇನೆ. ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಮ್ಮ ಸಿಬ್ಬಂದಿಯ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ. ದಿಃ 14-10-2018 ರಂದು ಚಾಸಾ 1 ರವರು ತೋರಿಸಿದ ಗುನ್ನಾ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಮಾಡಿರುತ್ತೇನೆ. ಅದೇ ದಿನ ಚಾಸಾ 4 ಮತ್ತು 5 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಖಾಜಾ ಹುಸೇನ ಪಿ.ಎಸ್.ಐ ಅವರಿಗೆ ಕಡತವನ್ನು ನೀಡಿರುತ್ತೇನೆ.

ಸಾಕ್ಷಿಯು ನಿಪಿ. 1 ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1, ಸಾಕ್ಷಿಯ ಸಹಿಯನ್ನು ನಿಪಿ. 1 ಎ ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು

ಅದನ್ನು ನಿಪಿ. 6 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ. 6 ಎ ಎಂದು ಗುರುತಿಸಲಾಯಿತು. ನಿಪಿ. 2 ರಲ್ಲಿ ಇರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2 ಎ ಅಂತಾ ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ. ಎಸ್ ಡಿ ಬಿ ವಕೀಲರಿಂದಃ

ದೂರನ್ನು ನೀಡಲು ಚಾಸಾ 1 ರವರು ಮಾತ್ರ ಬಂದಿದ್ದರು. ಅವರಿಗೆ ಯಾವದಾರರೂ ಗಾಯ ಆಗಿತ್ತಾ ಎಂದರೆ ಸಾಕ್ಷಿಯು ಅವರು ಮೊದಲು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬಂದಿದ್ದರು. ನಿಪಿ. 1 ರಲ್ಲಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದ ಬಗ್ಗೆ ನಮೂದು ಇದೆಯಾ ಎಂದರೆ ಸಾಕ್ಷಿಯು ಅವರು ಬಾಯಿ ಮಾತಿನಿಂದ ಹೇಳಿದ್ದರು ನಿಪಿ. 1 ರಲ್ಲಿ ನಮೂದು ಇಲ್ಲ ಎಂದು ಹೇಳುತ್ತಾರೆ. ನಾನು ಚಾಸಾ 1 ರವರು ಎಷ್ಟು ಗಂಟೆಗೆ ಆಸ್ಪತ್ರೆಗೆ ಹೋಗಿದ್ದರು ಅಂತಾ ವಿಚಾರಣೆ ಮಾಡಿರುವುದಿಲ್ಲ. ಗುನ್ನಾ ಸ್ಥಳದ ಸರ್ವೆ ನಂಬರ ನನಗೆ ಗೊತ್ತಿಲ್ಲ. ನಾನು ಗುನ್ನಾ ಸ್ದಳಕ್ಕೆ ಹೋದಾಗ ಕೇಬಲ್ ವೈಯರ್ ತುಂಡರಿಸಿ ಬಿದಿದ್ದು ಕಂಡು ಬಂದಿರುವುದಿಲ್ಲ. ಅದೇ ದಿನ ಆರೋಪಿತರು ಚಾಸಾ 1 ರವರ ವಿರುದ್ದ ದೂರನ್ನು ದಾಖಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಆರೋಪಿತರು ಮತ್ತು ಚಾಸಾ 1 ರವರ ಮಧ್ಯೆ ಎಷ್ಟುಪ್ರಕರಣಗಳು ಇರುತ್ತವೆ ಅಂತಾ ವಿಚಾರಣೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ಕೇವಲ ಪ್ರ.ವ. ವರದಿಯನ್ನು ತಯಾರಿಸಿ ಪಂಚನಾವೆಯನ್ನು ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ನಾನು ಈ ಪ್ರಕರಣದ ತನಿಖಾಧಿಕಾರಿ ಆದ ಕಾರಣ ನನಗೆ ಸದರಿ ವಿಷಯದ ಬಗ್ಗೆ ತನಿಖೆ ಮಾಡಬೇಕಾದ ಕರ್ತವ್ಯ ಇರುತ್ತದೆ ಎಂದರೆ ಸಾಕ್ಷಿಯು ಅವರು ದೂರು ನೀಡಿದ್ದನ್ನು ಸ್ವೀಕರಿಸಿರುತ್ತೇನೆ. ನಾನು ಕೇವಲ ಪ್ರಥಮ ತನಿಖಾಧಿಕಾರಿ ಮಾತ್ರ ಇರುತ್ತೇನೆ ಎನ್ನುತ್ತಾರೆ. ನಾನು ಚಾಸಾ 4 ಮತ್ತು 5 ರವರ ಹೇಳಿಕೆಯನ್ನು ಘಟನಾ ಸ್ಥಳದಲ್ಲಿ ತೆಗೆದುಕೊಂಡಿರುತ್ತೇನೆ. ನೀವು ಹೇಳಿಕೆಯಲ್ಲಿ ಘಟನಾ ಸ್ಥಳದಲ್ಲಿ ಪಡೆದುಕೊಂಡ ಬಗ್ಗೆ ನಮೂದು ಮಾಡಿದ್ದಾರಾ ಎಂದರೆ ಸಾಕ್ಷಿಯು ನಾನು ಯಳಸಂಗಿ ಸೀಮಾಅಂತರದಲ್ಲಿ ಪಡೆದುಕೊಂಡಿರುತ್ತೇನೆ ಅಂತಾ ನಮೂದು ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ನಾನು ಯಾವುದೇ ದೂರನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಗುನ್ನಾ ಸ್ಥಳದ ಪಂಚನಾಮೆ ಮಾಡಿದೇ ಇದ್ದರೂ ಯಾವುದೇ ಸಾಕ್ಷಿದಾರರ ಹೇಳಿಕೆ

ತೆಗೆದುಕೊಳ್ಳದೇ ಇದ್ದರೂ ತೆಗೆದುಕೊಂಡಿರುತ್ತೇನೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಂದಿನ ತನಿಖೆಗಾಗಿ ಖಾಜಾ ಹುಸೇನರವರಿಗೆ ಕಡತವನ್ನು ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ:</u>

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.